O.S. NO. 93/2014
DW - 3 .
Dated 09-06-2026.

ಸಾಕ್ಷಿಯನ್ನು ಈ ದಿನ ದಿನಾಂಕ 09-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ವಾದಿಯರ ಪರವಾಗಿ ಶ್ರೀ ಎನ್ ಎಮ್ ಕೆ ವಕೀಲರಿಂದಃ

3 ನೇ ಪ್ರತಿವಾದಿ ನನಗೆ ಹೇಗೆ ಸಂಬಂಧಿಕ ಎಂದರೆ ಅವರಿಗೆ ನಮ್ಮ ತಂಗಿಯನ್ನು ಕೊಟ್ಟು ಮದುವೆ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ಸದರಿ ನನ್ನ ತಂಗಿಯ ಮದುವೆ 30-35 ವರ್ಷಗಳ ಹಿಂದೆ ಆಗಿರುತ್ತದೆ. ಅವರ ಮದುವೆ 1990-91 ನೇ ಸಾಲಿನಲ್ಲಿ ಆಗಿರುತ್ತದೆ ಎಂದರೆ ನನಗೆ ಇಸವಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 3 ನೇ ಪ್ರತಿವಾದಿಯ ತಂದೆ ಈ ಮೃತಪಟ್ಟು 17-18 ವರ್ಷಗಳು ಆಗಿರುತ್ತವೆ. ಅವರು ದಿನಾಂಕ 13-11-2018 ರಂದು ಮೃತಪಟ್ಟಿರುತ್ತಾರೆ ಎಂದರೆ ನನಗೆ ತಾರೀಖು, ತಿಂಗಳು , ಇಸವಿ ಲಕ್ಷ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆ ಈಗ ಮೃತಪಟ್ಟಿರುತ್ತಾರೆ. ಅವರು ಮೃತಪಟ್ಟು ಈಗ 9-10 ವರ್ಷಗಳು ಆಗಿರುತ್ತವೆ. ದೇವಲಾಪುರ ಗ್ರಾಮದಿಂದ ಮುತ್ನಾಳ ಗ್ರಾಮ 40 ಕಿ ಮಿ ಅಂತರದಲ್ಲಿ ಇದೆ ಎಂದರೆ ಸರಿ. ನನ್ನ ತಂದೆ ಮುತ್ನಾಳದಿಂದ ದೇವಲಾಪುರ ಗ್ರಾಮಕ್ಕೆ ತನ್ನ ಮಗಳ ಮನೆಗೆ ಎಷ್ಟು ಸಲ ಬಂದಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರದು ಕೆಲಸ ಇದ್ದಾಗ ಬರುತ್ತಿದ್ದರು ಲೆಕ್ಕ ಹೇಳಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ನನ್ನ ತಂಗಿ ಮನೆಗೆ ಎಷ್ಟು ಸಲ ಬಂದಿರುತ್ತೇನೆ ಎಂದರೆ ನೆನಪಿರುವುದಿಲ್ಲ.

O.S. NO. 93/2014
DW - 3 .
Dated 09-06-2026.

3 ನೇ ಪ್ರತಿವಾದಿಗೆ 7 ಜನ ಅಣ್ಣ ತಮ್ಮದಿರುತ್ತಾರೆ. ಸಾಕ್ಷಿ ಮುಂದುವರೆದು ಅವರು 6 ಜನ ಅಣ್ಣ ತಮ್ಮದಿರು, ಒಬ್ಬಳು ಸಹೋದರಿ ಇರುತ್ತಾಳೆ ಎಂದು ನುಡಿದಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ಈಗಾಗಲೇ ತೀರ್ಪು ಆಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರಸ್ತುತ ದಾವೆಯಲ್ಲಿ 3 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆ ಸಲ್ಲಿಸಿ ಜವಾಬು ಹೇಳಿದ ನಂತರ ತಿರ್ಪು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವೆಯಲ್ಲಿ ಇನ್ನೂ 2 ಆಸ್ತಿ ಸೇರಿಸಿಲ್ಲ ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಾ ಎಂದರೆ ನನಗೆ 3 ನೇ ಪ್ರತಿವಾದಿ ಸದರಿ 2 ಆಸ್ತಿಗಳು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದು ನನಗೆ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ಹೇಳುತ್ತಿರುವ ಈ 2 ಆಸ್ತಿಗಳ ಬಗ್ಗೆ 3 ನೇ ಪ್ರತಿವಾದಿ ಈಗಾಗಲೇ ತನ್ನ ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತಾನೆ ಎಂದರೆ ಸರಿ. ಸದರಿ ಆಸ್ತಿಗಳ ಕುರಿತು 3 ನೇ ಪ್ರತಿವಾದಿಯ ಪಾಟಿ ಸವಾಲು ಆಗಿ ವಿಚಾರಣೆ ಆದ ನಂತರ ತೀರ್ಪು ಆಗಿರುತ್ತದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. 3 ನೇ ಪ್ರತಿವಾದಿ ದಿನಾಂಕ 02-02-2024 ರಂದು ನಾನು ಹೇಳುತ್ತಿರುವ 2 ಆಸ್ತಿಗಳನ್ನು ದಾವೆಯಲ್ಲಿ ಸೇರಿಸಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯನ್ನು ದಿನಾಂಕ 13-02-2024 ರಂದು ಇದೇ ನ್ಯಾಯಾಲಯ ತಿರಸ್ಕರಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 261/3ಅ ಕ್ಷೇತ್ರ 2 ಎಕರೆ 6 ಗುಂಟೆ ಜಮಿನು ಯಾರು ಯಾರಿಂದ ಖರೀದಿಸಿದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ಜಮಿನು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಸರ್ವೆ

O.S. NO. 93/2014
DW – 3 .
Dated 09–06–2026.

ನಂ. 29/3 ಮತ್ತು 34/2ಬ ಕುರಿತು ಯಾರು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಯಾರಿಗೆ ಎಷ್ಟು ಪಾಲು ಕೊಡಬೇಕೆಂದು ವಾದಿಯರಿಗೆ ಮತ್ತು ಪ್ರತಿವಾದಿಯರಿಗೆ ಮಾತ್ರ ಸಂಬದಿಸಿದ್ದು ನನಗೆ ಯಾವುದೇ ರೀತಿ ಸಂಬಂದ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಸರ್ವೆ ನಂ. 29 ಮತ್ತು 34 ಎರಡೇ ಸರ್ವೆ ನಂಬರ ಮಾತ್ರ ಇರುತ್ತವೆ. ಸದರಿ ಈ 2 ಆಸ್ತಿಗಳನ್ನು ಹೊರತು ಪಡಿಸಿ ಬೇರೆ ದಾವಾ ಆಸ್ತಿಗಳು ಇರುವುದಿಲ್ಲ. ಈ 2 ಆಸ್ತಿಗಳ ಚಕ್ಕಬಂದಿ ಹೇಳಬಲ್ಲೆ. ಸರ್ವೆ ನಂ. 78/2 ರ ಬಗ್ಗೆ ನನಗೆ ಗೊತ್ತಿರುವುದಿಲ್ಲ. 3 ನೇ ಪ್ರತಿವಾದಿ ಟೈಪ ಮಾಡಿಸಿದ್ದನು ಸಹಿ ಮಾಡಿ ಮಾತ್ರ ನನ್ನ ಸಾಕ್ಷಿ ಪ್ರಮಾಣ ಪತ್ರ ಎಂದು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿ ಯಾವ ಯಾವ ಡೈರಿಗಳು ಹಾಜರ ಮಾಡಿಲ್ಲ ಮತ್ತು ನನಗೆ ಅವುಗಳ ಬಗ್ಗೆ ಗೊತಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ಬರೆಸಿ ಡೈರಿ ನಂ. 3945 ಅದು ಯಾವಾಗ ಮಂಜೂರಾಗಿರುತ್ತದೆ ಎಂದು ನನಗೆ ಗೊತಿಲ್ಲ. ಸದರಿ ಡೈರಿ 3 ನೇ ಪ್ರತಿವಾದಿಗೆ ಏಕೆ ಸಂಬಂದ ಇರುವುದಿಲ್ಲ ಎಂದು ನನಗೆ ಹೇಳಲು ಬರುವುದಿಲ್ಲ. 5 ನೇ ಪ್ರತಿವಾದಿ ಪ್ರೇಮಾವತಿ ತನ್ನ ಹಿಸ್ಸೆ ಕೊಟ್ಟಿರುವುದಿಲ್ಲ, ಹಿಸ್ಸೆ ಕೊಡಸಿ ಎಂದು ನನಗೆ ಯಾವತ್ತು ಹೇಳಿರುವುದಿಲ್ಲ. ವಾದಿಯರು ಪ್ರಸ್ತುತ ದಾವೆಯಲ್ಲಿ ತಮ್ಮ ಎಷ್ಟು ಹಿಸ್ಸೆ ಬೆಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 5 ನೇ ಪ್ರತಿವಾದಿ ಪ್ರೇಮಾವತಿ ಪ್ರಸ್ತುತ ದಾವೆಯಲ್ಲಿ ತನ್ನ ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸಿರುತ್ತಾರೊ ಇಲ್ಲವೊ ಎಂದು ನನಗೆ ಗೊತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ವನ್ನು 3 ನೇ ಪ್ರತಿವಾದಿ

ಮಾಹಿತಿ ಕೊಟ್ಟು ವಕೀಲರ ಮೂಲಕ ಟೈಪ ಮಾಡಿಸಿದ್ದನ್ನು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಊರಿನಲ್ಲಿ ವಾಟ್ನಿ ಆದದನ್ನು ಎಲ್ಲ ಜನರಿಗೆ ಗೊತ್ತಿದ್ದರಿಂದ ಅವರು ಯಾರು ಸಾಕ್ಷಿ ನುಡಿಯಲು ಮುಂದೆ ಬರದೇ ಇದ್ದುದರಿಂದ ನನಗೆ ಪ್ರಸ್ತುತ ದಾವೆಯಲ್ಲಿ 3 ನೇ ಪ್ರತಿವಾದಿ ಸಾಕ್ಷಿ ನುಡಿಯಲು ಕರೆದು ಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಿಟಿ ಎಸ್ ನಂ. 2646 ಬೈಲಹೊಂಗಲ ಪಟ್ಟಣದಲ್ಲಿ ಇದೆ ಎಂದು ವಾದಿಯರ ಮತು ಪ್ರತಿವಾದಿಯರ ತಂದೆ ನನಗೆ ತಿಳಿಸಿದ್ದರು, ಸದರಿ ಸಿಟಿ ಎಸ್ ಆಸ್ತಿ ಉತಾರವನ್ನು ನಾನು ನೊಡಿರುವುದಿಲ್ಲ. ಸದರಿ ಆಸ್ತಿ ಯಾರ ಕಬ್ಜಾದಲ್ಲಿ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸಿ ಟಿ ಎಸ್ ಆಸ್ತಿ ವಾದಿಯರ ಮತುತ ಪ್ರತಿವಾದಿಯರ ಕಬ್ಜಾದಲ್ಲಿ ಇರುವುದಿಲ್ಲ, ಅದರ ಕಬ್ಜಾವನ್ನು ಕೊಡಿಸುವಂತೆ ವಾದಿಯರು ಫ್ರಾರ್ಥಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತಿತಲ್ಲ. ಸದರಿ ಸಿ ಟಿ ಎಸ ಆಸ್ತಿ ಕುರಿತು ಇದೆ ನ್ಯಾಯಾಲಯದಿಂದ ತೀರ್ಪು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾದ ಆಸ್ತಿಗಳನ್ನು ಯಾವತ್ತು ನೊಡಿರುವುದಿಲ್ಲ ಮತ್ತು ಅವುಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ಸಹ 3 ನೇ ಪ್ರತಿವಾದಿಯ ಮಾತು ಕೇಳಿಕೊಂಡು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಮನೆಯ ನಂಬರ ನನಗೆ ಗೊತ್ತಿಲ್ಲ. ಮನೆ ಆಸ್ತಿಗಳ ಕುರಿತು ವಾದಿಯರು ಮತ್ತು ಪ್ರತಿವಾದಿಯರ ಮದ್ಯೆ ಪಾಲು ವಿಬಾಗ ಆಗಿದ್ದು, ಅವರವರು ತಮ್ಮ ತಮ್ಮ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿ ಈಗಾಗಲೇ ಕೊಟ್ಟ ಜವಾಬನ್ನು ತಿದ್ದುಪಡಿ ಮಾಡಿಕೊಳ್ಳಬೇಕು ಎಂಬ ಉದ್ದೇಶದಿಂದ ನಾವು ಮತ್ತು 3 ನೇ

O.S. NO. 93/2014

DW - 3 .

Dated 09-06-2026.

ಪ್ರತಿವಾದಿ ಸೇರಿ ಇದೊಂದು ಸುಳ್ಳು ಜವಾಬ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ. 29/3 ಮತ್ತು ಸರ್ವೆ ನಂ. 34/2ಬ ಇವು ವಾದಿಯರು ಖರೀದಿ ಮಾಡಿದ ಆಸ್ತಿಗಳು ಇದ್ದು ಅವು ವಾದಿಯರ ಮಾಲ್ಕಿ ಕಬ್ಜಾ ವಹಿವಾಟನಲ್ಲಿ ಮಾತ್ರ ಇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ವಾದಿಯರ ಮತ್ತು ಪ್ರತಿವಾದಿಯರ ತಂದೆ ಖರೀದಿಸಿರುವ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ -ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು

ಬೈಲಹೊಂಗಲ.